# ಭೂ ಗರ್ಭದಲ್ಲೊಂದು ಗೋ ಗರ್ಭ!

ಗೋವಿನ ಗರ್ಭದ ಆಕಾರದಲ್ಲಿರುವಂತಹ ಈ ಗುಹೆಯು ನಮ್ಮ ಕರ್ನಾಟಕದ ಗೋಕರ್ಣ ಕ್ಷೇತ್ರದಲ್ಲಿದೆ. ಈ ಗುಹೆಗೆ 'ಗೋ ಗರ್ಭ' ಎಂದೇ ಹೆಸರು. ಇದರ ಬಗ್ಗೆ ಗೋಕರ್ಣದ ನೆಲೆವಾಸಿಗಳಿಗೆ ಗೊತ್ತಿರುವುದು ಬಿಟ್ಟರೆ, ಇಲ್ಲಿಗೆ ಬರುವ ಯಾವ ಪ್ರವಾಸಿಗರಿಗೂ ಗೊತ್ತಿರಲಿಕ್ಕಿಲ್ಲ. ಇದು ಕುಡ್ಲೆ ಬೀಚ್‌ಗೆ ಹೋಗುವ ದಾರಿಯಲ್ಲಿ ಸಿಗುತ್ತದೆ. ಪುರಾಣಗಳ ಪ್ರಕಾರ ತ್ರೇತಾ ಯುಗದಲ್ಲಿ ಭೂದೇವಿಯು ಶಿವನನ್ನು ಕುರಿತು ಇದೇ ಜಾಗದಲ್ಲಿ ತಪಸ್ಸು ಮಾಡಿದ್ದಳಂತೆ. ಹಿಂದೊಮ್ಮೆ ಶಿವನ ಆತ್ಮಲಿಂಗವು ದೇವಸ್ಥಾನದಿಂದ ಮಾಯವಾಗಿ ಗೋವಿನ ರೂಪದಲ್ಲಿ ಬಂದು ಇಲ್ಲಿ ವಿಶ್ರಾಂತಿ ಪಡೆದಿತ್ತಂತೆ.

ಹಿಂದೆ ಇಲ್ಲಿ ಅನೇಕ ಋಷಿ ಮುನಿಗಳು ತಪಗೈದಿದ್ದರಂತೆ. ಹಾವೊಂದು ಈ ಋಷಿಗಳಿಗೆ ಉಪದ್ರವ ಕೊಡುತಿದ್ದ ಕಾರಣ ಋಷಿಗಳು ಆ ಹಾವಿಗೆ 'ಕಲ್ಲಾಗು' ಎಂದು ಶಾಪಿಸಿದರಂತೆ. ನಾವು ಗುಹೆಯನ್ನು ಪ್ರವೇಶಿಸುತ್ತಿದ್ದಂತೆ ಈ ಕಲ್ಲಿನ ನಾಗರ ಕಾಣಸಿಗುತ್ತದೆ. ಇಲ್ಲಿ ಅನೇಕ ಒಳ ದಾರಿಗಳಿದ್ದು, ಇದರ ಮೂಲಕ ಕಾಶಿ, ಕೋಟಿ ತೀರ್ಥ ಹಾಗೂ ಆದಿ ಗೋಕರ್ಣಕ್ಕೆ ಹೋಗಬಹುದು ಎಂದು ಇಲ್ಲಿನ ನೆಲೆವಾಸಿಗಳ ನಂಬಿಕೆ.



ಗುಹೆಯ ಒಳಗೆ ಒಂದು ಶಿವಲಿಂಗವು ಸ್ಥಾಪಿತವಾಗಿದೆ (195 BC). ಶಿವಲಿಂಗದ ಮುಂಭಾಗದಲ್ಲಿ (ಮೇಲೆ) ಒಮ್ಮೆಗೆ ಒಬ್ಬ ಸಣಕಲು ಮನುಷ್ಯ ನುಸುಳಬಹುದಾದಂತಹ ರಂಧ್ರವಿದೆ. ಈ ರಂಧ್ರವು ಗೋವಿನ ಕಿವಿಯ ಆಕಾರಕ್ಕೆ ಹೋಲುತ್ತದೆ. ಗುಹೆಯ ಒಳಗೆ ಕಗ್ಗತ್ತಲಿದ್ದು, ಈ ರಂದ್ರದ ಮೂಲಕ ಮಾತ್ರ ಸೂರ್ಯನ ಕಿರಣಗಳು ಶಿವಲಿಂಗದ ಮುಂದೆ ಬೀಳುತ್ತದೆ. ಕೆಲವರು ಗೋವಿನ ಗರ್ಭದಿಂದ ಗುಹೆಯ ಒಳಬಂದು, ಕಿವಿಯಿಂದ ಹೊರಬರುತ್ತಾರೆ. ಗುಹೆಯ ಎದುರು ಸುಮಾರು ಎರಡು/ಮೂರು ಅಡಿ ಆಳವಿರುವ 'ಕಮಂಡಲ ತೀರ್ಥ' ವಿದೆ. ಯಾವ ಕಾಲಕ್ಕೂ ಇದರಲ್ಲಿರುವ ನೀರು ಬತ್ತುವುದಿಲ್ಲ. ಇದು ಒಂದು ಸೋಜಿಗವೆ ಸರಿ! ಇಂದಿಗೂ ಹಲವು ಸಂತರು ಇಲ್ಲಿ ವಿಶ್ರಮಿಸಿ, ಲಿಂಗಕ್ಕೆ ಪೂಜಿಸಿ ಮುಂದೆ ಸಾಗುತ್ತಾರೆ. ಯಾರು ಇಲ್ಲಿನ ಶಿವಲಿಂಗವನ್ನು ಭಕ್ತಿಯಿಂದ ಪೂಜಿಸುತ್ತಾರೋ ಅವರಿಗೆ ತಮ್ಮ ಜೀವನದಲ್ಲಿ ಸ್ವಂತ ಭೂಮಿಯನ್ನು ಕೊಳ್ಳುವ / ನಿವೇಶನ ಕಟ್ಟುವ ಭಾಗ್ಯವನ್ನು ಈಶ್ವರ ಕರುಣಿಸುತ್ತಾನೆ ಎಂಬ ನಂಬಿಕೆ ಇದೆ.

–ಮೇಘನಾ



# ಮ್ಯೂಸಿಯಂನಲ್ಲಿ ಕಾಮನ್ ಮ್ಯಾನ್!

ದೇಶ ಕಂಡ ಸುಪ್ರಸಿದ್ಧ ವ್ಯಂಗ್ಯಚಿತ್ರಕಾರರಲ್ಲಿ ಆರ್.ಕೆ. ಲಕ್ಷ್ಮಣ್ ಒಬ್ಬರು. ಅವರ ಅದ್ಭುತ ಸೃಷ್ಟಿಯಾದ, ಜನಗಳಿಂದ ತುಂಬಾ ಪ್ರೀತಿಸಲ್ಪಟ್ಟ ಕಾರ್ಟೂನ್ ಪಾತ್ರ 'ಕಾಮನ್ ಮ್ಯಾನ್'. ಮೈಸೂರಿನವರೇ ಆದ ಆರ್. ಕೆ. ಲಕ್ಷ್ಮಣ್ ಅವರಿಗೆ ಗೌರವಸೂಚಕವಾಗಿ 'ಕಾಮನ್ ಮ್ಯಾನ್' ಪ್ರತಿಮೆಯನ್ನು ಮೈಸೂರಿನ ರೈಲ್ವೆ ವಸ್ತುಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಜೊತೆಗೆ ರೈಲು, ಸಾಮಾನ್ಯ ಜನರ ನಡುವೆ ಇರುವ ಭರವಸೆ ಮತ್ತು ಆಕಾಂಕ್ಷೆಗಳ ದ್ಯೋತಕವಾಗಿ ಈ ಪ್ರತಿಮೆಯನ್ನು ಇರಿಸಿರುವುದು ವಿಶೇಷ.

ಈ ಸುಂದರ ಪ್ರತಿಮೆಯ ಶಿಲ್ಪಿ ಅರುಣ್ ಯೋಗಿರಾಜ್. ಚೌಕಳಿಗಳಿಂದ ಕೂಡಿರುವ ಕೋಟು, ಮುಖದಲ್ಲಿ ಮಂದಹಾಸದೊಂದಿಗೆ ಪುಸ್ತಕ ಓದುತ್ತಾ ನಿಂತ ಭಂಗಿಯಲ್ಲಿರುವ 'ಕಾಮನ್ ಮ್ಯಾನ್' ಇತ್ತೀಚೆಗೆ ಪ್ರಪಂಚವನ್ನು ಕಾಡುತ್ತಿರುವ ಕೊರೊನ ವೈರಸ್ ವಿರುದ್ಧ ಹೋರಾಟದ ಸೂಚಕವಾಗಿ ಮಾಸ್ಕ್ ಕೂಡ ಧರಿಸಿ ನಿಂತಿದ್ದಾನೆ. ಮೈಸೂರಿನಲ್ಲಿ ನೋಡಲೇಬೇಕಾದ ಜಾಗಗಳಲ್ಲಿ ರೈಲ್ವೆ ಮ್ಯೂಸಿಯಂ ಕೂಡ ಒಂದು. ಇಲ್ಲಿರುವ ಹಲವು ಆಕರ್ಷಣೆಗಳಲ್ಲಿ ಆರ್.ಕೆ. ಲಕ್ಷ್ಮಣ್ ಅವರ 'ಕಾಮನ್ ಮ್ಯಾನ್' ಮುಖ್ಯವಾದುದು.

–ಪೂರ್ಣಿಮಾ ಭಟ್, ಮೈಸೂರು

# ಕೆಂಪು ಮುರಕಲ್ಲು ಬಾನಿ

ಸುಮಾರು 150–200 ವರ್ಷಗಳಷ್ಟು ಹಳೆಯದಾಗಿರುವ ಕೆಂಪುಮುರ ಕಲ್ಲಿನಲ್ಲಿ ಕೊರೆದ ಸುಮಾರು 250–300 ಕಿಲೋ ತೂಕವಿರುವ ಈ ಕಲ್ಲಿನ ಬಾನಿಯು ಈ ಮೊದಲು ನಮ್ಮ ಕುಟುಂಬದ ಮೂಲಮನೆಯಲ್ಲಿದ್ದು, ಗುಡ್ಡದಲ್ಲಿ ಮೇಯ್ದು ಬಂದ ಜಾನುವಾರುಗಳಿಗೆ ನೀರೂಡಿಸಲು ಬಳಸುತ್ತಿದ್ದರು. ಕ್ರಮೇಣ ಅನುಪಯುಕ್ತವಾಗಿದ್ದ ಈ ಬಾನಿಯನ್ನು ನಮ್ಮ ಮನೆಗೆ ತಂದು ಇರಿಸಿದ್ದೇವೆ. ಅಂದು ಜಾನುವಾರುಗಳಿಗೆ ನೀರುಣಿಸುತ್ತಿದ್ದ ಇದು ಇಂದು ಹಲವಾರು ಪಕ್ಷಿಗಳಿಗೆ ನೀರುಣಿಸುತ್ತಿದೆ.

–ದೇವಯಾನಿ ಶರ್ಮಾ, ಮಂಗಳೂರು

